

# ಆಸ್ಟ್ರೇಲಿಯಾದ ಚಿನ್ನದ ಕರಾವಳಿ

■ ಪ್ರಕಾಶ್ ಶೆಟ್ಟಿ



ಈ ಚಿನ್ನದ ಕರಾವಳಿಯಲ್ಲಿ ಮೆರುಗು, ತಳಕು, ಮನರಂಜನೆ ಮತ್ತು ಮುಖ್ಯವಾಗಿ ಬೇಕಾದಷ್ಟು ಕುತೂಹಲಗಳಿವೆ. ಎಲ್ಲಾ ವಿದೇಶಿ ನಗರಗಳಲ್ಲಿರುವಂತೆ ಇಲ್ಲೂ ರಸ್ತೆಗಳು ಖಾಲಿ ಖಾಲಿ! ಆಗೊಮ್ಮೆ ಈಗೊಮ್ಮೆ ಓಡುವ ಕಾರುಗಳು, ಟ್ರ್ಯಾಮ್ ಗಳು (ರೈಲು ಬಸ್ಸು).. ಭಾರತದಲ್ಲಿರುವಂತೆ ದ್ವಿಚಕ್ರ ವಾಹನಗಳ 'ಕುರಿ ಮಂದೆ ' ಇಲ್ಲಿ ಕಾಣುವುದಿಲ್ಲ. ಯಾಕೆಂದರೆ ಇಡೀ ಗೋಲ್ಡ್ ಕೋಸ್ಟ್ ನಲ್ಲಿ ಬೆರಳೆಣಿಕೆಯಷ್ಟು ದ್ವಿಚಕ್ರ ವಾಹನಗಳಿರಬಹುದೇನೋ! ಅದೂ ಸ್ಪೋರ್ಟ್ಸ್ ಬೈಕ್‌ಗಳು.

ಕೋಲ್ಕತ್ತದಲ್ಲಿರುವ ತ್ರಿಚಕ್ರ ಸೈಕಲ್ ಗಳಿಗೆ ಇಲ್ಲೇನು ಕೆಲಸ ಅಂದುಕೊಳ್ಳುವಾಗಲೇ ಹುಡುಗಿಯೊಬ್ಬಳು ಸೈಕಲ್ ತುಳಿಯುತ್ತಾ ನನ್ನ ಹತ್ತಿರ ಬಂದು ನಗು ಚೆಲ್ಲಿ ಕೇಳಿದಳು 'ವಾನ್ನಾ ಎ ರೈಡ್ ?' ಹೌದು, ಈ ಟ್ರೈಸೈಕಲ್ ನಲ್ಲಿ ನನ್ನಂತಹ ಬಡ ಪ್ರವಾಸಿಗರು ಅಗ್ಗದ ರೇಟಿನಲ್ಲಿ ನಗರ ಸುತ್ತಾಡಬಹುದು.

ಸುತ್ತಲೂ ಬೃಹತ್ ಕಟ್ಟಡಗಳು. ಅದರಲ್ಲೂ ಎದ್ದು ಕಾಣುತ್ತಿದ್ದ 'ಸ್ಕೈ ಕ್ಲೈಮ್' ಕಟ್ಟಡ. ಇದು ಜಗತ್ತಿನ ಅತೀ ಎತ್ತರದ ಕಟ್ಟಡಗಳಲ್ಲಿ ಒಂದು. ಎಪ್ಪತ್ತೇಳು ಮಹಡಿಗಳಿವೆ. ಈ ಮಹಡಿಗಳನ್ನು ದಾಟಿ, ಮುಂದೆ 140 ಅಡಿ ಎತ್ತರಕ್ಕೇರುವ ವ್ಯವಸ್ಥೆ ಇಲ್ಲಿರುವುದೇ ಈ ಕಟ್ಟಡದ ವಿಶೇಷ.

ಭಾರತದಲ್ಲಿ ಚೀನಾದ ಸರಕುಗಳಷ್ಟೇ ಇದೆ. ಆದರೆ ಇಲ್ಲಿ ಸರಕುಗಳೊಂದಿಗೆ ಚೀನಿಗರೂ ತುಂಬಿ ಹೋಗಿದ್ದಾರೆ. ಆಸ್ಟ್ರೇಲಿಯದ ಸ್ಮರಣಿಕೆಯಾಗಿ ಏನಾದರೂ ಕೊಂಡುಕೊಂಡಿದ್ದರೆ ಅದನ್ನು ನೋಡಿ ಮನೆಯಲ್ಲಿ ನಗೆ ಪಾಟಲಿಗೆ ಗುರಿಯಾಗಬಹುದು. ಯಾಕೆಂದರೆ ನೀವು ಆಸ್ಟ್ರೇಲಿಯಾದಿಂದ ತಂದಿರುವುದು ಮೇಡ್ ಇನ್ ಚೈನಾ !

ಹೊಟ್ಟೆ ವಿಚಾರಕ್ಕೆ ಬಂದರೆ ನಾನು ಕಂಡು ಕೊಂಡ ಸತ್ಯ ಇಷ್ಟೇ. ಇಲ್ಲಿ ಜಾಸ್ತಿ ಹಸಿವು ಆಗುವುದು ಒಳೆಯದ್ದಲ್ಲ. ತಿನ್ನುಬಾಕರಂತೂ ಡಯಟ್ ಮಾಡುತಿದ್ದೇವೆ ಎಂದು ಭಾವಿಸಿಕೊಂಡು ತೆಪ್ಪಗಿದ್ದರೆ ಇನ್ನೂ ಒಳ್ಳೆಯದು. ಸಿಗುವ ಆಹಾರಗಳಿಗೆ 'ಕಟ್ಟಲಾಗದಂತಹ ಬೆಲೆ' ಒಂದು ಕಡೆಯಾದರೆ, ಇನ್ನೊಂದು ಕಡೆ ತಿನ್ನಲಾಗದ ಅಥವಾ ಹೊಟ್ಟೆ ತುಂಬಿಸಲಾಗದ ಭೋಜನವನ್ನು ಸಹಿಸಿಕೊಳ್ಳಲೇಬೇಕು. ಕರಾವಳಿ ಆಗಿರುವುದರಿಂದ ರುಚಿ ರುಚಿಯಾದ ಮೀನುಗಳನ್ನು ತಿಂದು ತೇಗಬಹುದೆಂದು ನಿರೀಕ್ಷಿಸಿದ್ದರೆ ನಿರಾಸೆ ಆಗುವುದರಲ್ಲಿ ಯಾವುದೇ ಸಂಶಯ ಬೇಡ. ಯಾಕೆಂದರೆ ಬೆಂದ ಮೀನು, ಏಡಿ ಅಥವಾ ಸಿಗಡಿಗಳಷ್ಟೇ ನಿಮ್ಮ ಟೇಬಲ್ ಮುಂದಿರುತ್ತವೆ. ಉಪ್ಪು, ಖಾರ, ಮಸಾಲದ ಮೇಲೆ ಇಲ್ಲಿಯವರಿಗೆ ಯಾಕೆ ಅಷ್ಟೊಂದು ಕೋಪವೋ!

ಇಂತಹ ದುಸ್ಥಿತಿಯಲ್ಲಿ ಭಾರತೀಯ ಆಹಾರ ಎಲ್ಲಾದರೂ ಸಿಗಬಹುದೇ ಎಂದು ಮನಸ್ಸಿಗೆ ತೋಚುವುದು ಸ್ವಾಭಾವಿಕ. 'ಮಸಾಲಾ ಶಾಂತಿ' ಎಂಬ ಆಕರ್ಷಕ ಹೆಸರಿನ ಹೋಟೆಲ್ಲೇ ಇಲ್ಲಿದೆ! ಈ ಹೋಟೆಲ್ ಮಾಲೀಕ ಶೈಜು. ಬೆಂಗಳೂರಿನ ಶಿವಾಜಿನಗರದ ಹೋಟೆಲೊಂದರಲ್ಲಿ ಶೆಫ್ ಆಗಿದ್ದ ಶೈಜು ಒಬ್ಬ ಮಲಯಾಳಿ. ಈ 'ಮಸಾಲಾ ಶಾಂತಿ' ಹೆಸರಿಡುವುದಕ್ಕೆ ಒಂದು ಕಾಲಕ್ಕೆ